

ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ

ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರ

ಆಶೀರ್ವಚನ

MESSAGE

I am glad to know that the Ramakrishna Ashrama, Mysore, is starting a monthly journal in Kannada by name **Viveka Prabha.** *I have been striving for more than two decades to have such a journal in Kannada language. Similar journals are there in Tamil, Telugu, Malayalam, Bengali, Hindi and English. The Tamil journal,* **Ramakrishna Vijayam**, *has nearly 90,000 subscribers. Why not this Kannada journal have such a large number of subscribers?*

Swami Vivekananda loved Karnataka. He spent several days there, met the Maharaja of Mysore and also distinguished people, and had a great hope that Mysore (now Karnataka) would be a progressive state.

This **Viveka Prabha** *will be an instrument for spreading among the people man-making and nation building ideas. Our people have learnt much, but they have so much more to learn to become a modern progressive nation.*

I hope this journal will receive whole-hearted co-operation from the writers and scholars, and the general public.

I convey my love and blessings to **Viveka Prabha** *for the widespread diffusion of Ramakrishna-Vivekanada and Vedantic as well as modern scientific ideas among the people.*

Ranganathananda
(Swami Ranganathananda)
President

Ramakrishna Math &
Ramakrishna Mission
P O Belur Math,
Dist. Howrah
West Bengal: 711 202

ಮೈಸೂರು ರಾಮಕೃಷ್ಣ ಆಶ್ರಮವು ವಿವೇಕ ಪ್ರಭ ಎಂಬ ಕನ್ನಡ ಮಾಸಪತ್ರಿಕೆಯನ್ನು ಪ್ರಾರಂಭಿಸುತ್ತಿರುವ ವಿಷಯವನ್ನು ತಿಳಿದು ನನಗೆ ಸಂತೋಷವಾಗಿದೆ. ಕನ್ನಡ ಭಾಷೆಯಲ್ಲಿ ಇಂಥದೊಂದು ಪತ್ರಿಕೆ ಇರಬೇಕೆಂದು ಎರಡು ದಶಕಗಳಿಗೂ ಅಧಿಕ ಸಮಯದಿಂದ ನಾನು ಒತ್ತಾಯಿಸುತ್ತಿದ್ದೆ. ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಇದೇ ರೀತಿಯ ಪತ್ರಿಕೆಗಳಿವೆ. ತಮಿಳು ಪತ್ರಿಕೆ *ರಾಮಕೃಷ್ಣ ವಿಜಯಂ* ಸುಮಾರು ೯೦,೦೦೦ ಚಂದಾದಾರರನ್ನು ಹೊಂದಿದೆ. ಈ ಕನ್ನಡ ಪತ್ರಿಕೆಯೂ ಇದೇ ರೀತಿ ಅಧಿಕಸಂಖ್ಯೆಯಲ್ಲಿ ಚಂದಾದಾರರನ್ನು ಹೊಂದಬಾರದೇಕೆ?

ಸ್ವಾಮಿ ವಿವೇಕಾನಂದರು ಕರ್ನಾಟಕವನ್ನು ಪ್ರೀತಿಸುತ್ತಿದ್ದರು. ಅವರು ಬಹಳ ದಿನಗಳು ಅಲ್ಲಿ ಕಳೆದರು. ಮೈಸೂರು ಮಹಾರಾಜರನ್ನೂ ಇತರ ಖ್ಯಾತ ವ್ಯಕ್ತಿಗಳನ್ನೂ ಅವರು ಸಂಧಿಸಿದರು. ಮೈಸೂರು (ಈಗ ಕರ್ನಾಟಕ) ಪ್ರಗತಿಪರ ರಾಜ್ಯವಾಗುವುದೆಂಬ ಮಹದಾಸೆಯನ್ನು ಅವರು ಹೊಂದಿದ್ದರು.

ಮನುಷ್ಯನಿರ್ಮಾಣಕಾರಿ, ರಾಷ್ಟ್ರನಿರ್ಮಾಣಕಾರಿ ಭಾವನೆಗಳನ್ನು ಜನರಲ್ಲಿ ಹರಡುವ ಕಾರ್ಯದಲ್ಲಿ ವಿವೇಕಪ್ರಭವು ಒಂದು ಸಾಧನವಾಗುತ್ತದೆ. ನಮ್ಮ ಜನರು ಬಹಳಷ್ಟು ಕಲಿತಿದ್ದಾರೆ. ಆದರೆ ಆಧುನಿಕ ಪ್ರಗತಿಪರ ರಾಷ್ಟ್ರ ನಿರ್ಮಾಣವಾಗಬೇಕಾದರೆ ಅವರು ಇನ್ನೂ ಕಲಿಯುವುದು ಬಹಳವಿದೆ.

ಈ ಪತ್ರಿಕೆಯು ಲೇಖಕರ, ವಿದ್ವಾಂಸರ ಮತ್ತು ಸಾರ್ವಜನಿಕರ ಪೂರ್ಣ ಹೃದಯದ ಸಹಕಾರವನ್ನು ಪಡೆಯುವುದೆಂದು ನಾನು ಆಶಿಸುತ್ತೇನೆ. ರಾಮಕೃಷ್ಣ-ವಿವೇಕಾನಂದ ಮತ್ತು ವೇದಾಂತದ ಭಾವನೆಗಳನ್ನು ಹಾಗೂ ಆಧುನಿಕ ವೈಜ್ಞಾನಿಕ ಭಾವನೆಗಳನ್ನು ಎಲ್ಲೆಲ್ಲಿಯೂ ಪಸರಿಸುವ ಕಾರ್ಯದಲ್ಲಿ ವಿವೇಕಪ್ರಭವು ಯಶಸ್ವಿಯಾಗಲೆಂದು ನಾನು ಪ್ರೀತಿಪೂರ್ವಕವಾಗಿ ಆಶೀರ್ವದಿಸುತ್ತೇನೆ. □